# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಹಕಾರ ಸಂಸ್ಥೆ**

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

**www.souharda.coop, Ph: 080-23378375-80 Email : souharda@souharda.coop**


## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿಯಾಗಿದ್ದು, ದಿನಾಂಕ:11.02.2013ರಿಂದ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ಕಲಂ 23ಎರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ನೀಡಿರುವ ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ–5/2013–14, ದಿನಾಂಕ:28.06.2013 ಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡಿ ಪರಿಷ್ಕೃತ ಮಾನದಂಡಗಳನ್ನು ಈ ಕೆಳಗಿನಂತೆ ರೂಪಿಸಲಾಗಿದೆ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯ ಕರಡು ಸಿದ್ಧಪಡಿಸಿ ಸಲಹೆ/ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ಆಗಸ್ಟ್ ಮಾಹೆಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಸಿದ್ಧಪಡಿಸಲಾದ ಅಂತಿಮ ಕರಡನ್ನು ದಿನಾಂಕ: 18 ನವೆಂಬರ್ 2020 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 05ರಲ್ಲಿ ಅನುಮೋದಿಸಿ ನಿರ್ಣಯಿಸಲಾಗಿದೆ. ಹಾಗೂ ದಿನಾಂಕ: 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯ 19ರಲ್ಲಿ ಅನುಮೋದಿಸಿದ್ದು 01 ಜನವರಿ 2021ರಿಂದ ಅನ್ವಯವಾಗುವಂತೆ ನಿರ್ಣಯಿಸಲಾಗಿದೆ.

**ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ**

**ಕ.ಸೌ.ಸ. ಅಧಿನಿಯಮ, 1997ರ ಕಲಂ 23(ಎ) ಮತ್ತು 53 (7) (ಎ) ಹಾಗೂ (ಎಚ್) ಅಡಿ**

**ಸಂಖ್ಯೆ : ಸಂಸ/ಆಸು–02/2020–21** **ದಿನಾಂಕ: 01.01.2021**

**ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು**

1. ಹಿಂದಿನ ಆರ್ಥಿಕ ವರ್ಷದಲ್ಲಿ ಲಾಭ ಗಳಿಸಿದ್ದು, ಪ್ರಸಕ್ತ ಸಾಲಿನ ಸಹಕಾರಿಯ ವ್ಯವಹಾರವು ಹಿಂದಿನ ವರ್ಷದ ವ್ಯವಹಾರಕ್ಕಿಂತ ಹೆಚ್ಚಿರಬೇಕು.
2. ಈಗಾಗಲೇ ಶಾಖೆಗಳಿದ್ದಲ್ಲಿ ಶೇ.20ಕ್ಕಿಂತ ಹೆಚ್ಚು ಶಾಖೆಗಳು ನಷ್ಟದಲ್ಲಿರಬಾರದು.
3. ಸುಸ್ತಿ ಸಾಲದ ಪ್ರಮಾಣವು ನೀಡಿದ ಸಾಲ ಮತ್ತು ಮುಂಗಡಗಳ ಶೇ.15ನ್ನು ಅಥವಾ ಸ್ವಂತ ಬಂಡವಾಳದ ಶೇ.50 ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮೀರತಕ್ಕದ್ದಲ್ಲ.
4. ಪ್ರಸ್ತುತ ಇರುವ ಲಾಭವು ಪ್ರಸ್ತಾವಿತ ಶಾಖೆಯ ವೆಚ್ಚವನ್ನು ಭರಿಸಲು ಶಕ್ತವಾಗಿರಬೇಕು.
5. ಯಾವುದೇ ವಿಚಾರಣೆ ಬಾಕಿ ಇರಬಾರದು.

6. ಶಾಸನಬದ್ಧ ಕರ್ತವ್ಯಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ/ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)

7. ಶಾಖೆ ತೆರೆಯುವ ಪ್ರದೇಶದಲ್ಲಿ ಸಹಕಾರಿಯು ಕನಿಷ್ಠ 50 ಸದಸ್ಯರನ್ನು ಹೊಂದಿರತಕ್ಕದ್ದು.

8. ಸಂಯುಕ್ತ ಸಹಕಾರಿ ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ದ್ರವ್ಯಾಸ್ತಿ ನಿರ್ವಹಣೆ ಮತ್ತು ಸಾಲದ ಕುರಿತ ಮಾನದಂಡಗಳನ್ನು ಪಾಲಿಸಿರತಕ್ಕದ್ದು.

9. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ ಈ ಕೆಳಗಿನಂತಿರತಕ್ಕದ್ದು.

   1) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.20 ಲಕ್ಷ,
   2) ಮಹಾನಗರ ಪಾಲಿಕೆ ಹೊರತುಪಡಿಸಿದ ಜಿಲ್ಲಾ ಕೇಂದ್ರಗಳಿಗೆ ರೂ.10 ಲಕ್ಷ,
   3) ಇತರೆ ಕೇಂದ್ರಗಳಿಗೆ ರೂ.5 ಲಕ್ಷ

   – ಸಹಕಾರಿಯ ಈಗಾಗಲೆ ಇರುವ ಶಾಖೆಗಳಿಗೆ, ಈ ಮೇಲ್ಕಂಡಂತೆ ಸ್ವಂತ ಬಂಡವಾಳ ಹಂಚಿಕೆ ಮಾಡಿದ ನಂತರದಲ್ಲಿ ಉಳಿದ ಸ್ವಂತ ಬಂಡವಾಳವನ್ನು ಉದ್ದೇಶಿತ ಶಾಖೆಗಳಿಗೆ ಲೆಕ್ಕಾಚಾರ ಮಾಡುವುದು.

10. ಮೊದಲ ಐದು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಹಕಾರಿಯ ಲಾಭವನ್ನು ಪರಿಗಣಿಸತಕ್ಕದ್ದಲ್ಲ.

11. ಆರರಿಂದ ಇಪ್ಪತ್ತೈದರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ, ಎಲ್ಲ ನಿಬಂಧನೆಗಳು ಯಥಾವತ್ತಾಗಿ ಅನ್ವಯವಾಗತಕ್ಕದ್ದು.

12. ಇಪ್ಪತ್ತಾರರಿಂದ ಐವತ್ತರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಎಲ್ಲ ಮಾನದಂಡಗಳೊಂದಿಗೆ, ಸಂಯುಕ್ತ ಸಹಕಾರಿಯು ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳನ್ನು ಪೂರ್ಣವಾಗಿ ಪಾಲಿಸಿರತಕ್ಕದ್ದು.

13. ಇ ಸ್ಟಾಂಪಿಂಗ್ ಸೇರಿದಂತೆ ಯಾವುದೇ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಗಳಿಗೆ ಅನುಮತಿ ನೀಡುವಾಗ ಪ್ರಸ್ತಾವಿತ ಸೇವಾ/ಪತ್ತೇತರ ಚಟುವಟಿಕೆ ಹೊರತುಪಡಿಸಿ, ಪತ್ತಿನ ಚಟುವಟಿಕೆ ಸೇರಿದಂತೆ ಸಹಕಾರಿಯ ಇನ್ನಿತರ ಚಟುವಟಿಕೆ ನಡೆಸದಿರುವ ನಿಬಂಧನೆಯೊಂದಿಗೆ ಈ ಮಾನದಂಡಗಳಿಂದ ವಿನಾಯತಿ ಇರತಕ್ಕದ್ದು.

14. ಒಂದು ಸಹಕಾರಿಗೆ ಯಾವುದೇ ಸಹಕಾರ ವರ್ಷದಲ್ಲಿ ಐದಕ್ಕಿಂತ ಹೆಚ್ಚು ಶಾಖೆಗೆ ಅನುಮತಿ ನೀಡತಕ್ಕದ್ದಲ್ಲ ಹಾಗೂ ಸಹಕಾರಿಯ ಒಟ್ಟೂ ಶಾಖೆಗಳ ಸಂಖ್ಯೆಯು ಐವತ್ತನ್ನು ಮೀರತಕ್ಕದ್ದಲ್ಲ.

15. ಯಾವುದೇ ಪ್ರದೇಶದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಅಥವಾ ಸೌಹಾರ್ದ ಸಹಕಾರಿಯ ಶಾಖೆಗಳು ಇಲ್ಲದಿದ್ದಲ್ಲಿ, ಅಂತಹ ಪ್ರದೇಶಗಳಿಗೆ ಸಂಬಂಧಿಸಿದಂತೆ ಮೇಲಿನ ಯಾವುದೇ ನಿಬಂಧನೆಗಳಿಂದ ವಿನಾಯಿತಿ ನೀಡಿ ಶಾಖೆ ತೆರೆಯಲು ಅನುಮತಿ ನೀಡುವ ಅಧಿಕಾರ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಕ್ಷಮವಾಗಿರುತ್ತದೆ.
   – 'ಪ್ರದೇಶ' ಎಂದರೆ ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿ ವ್ಯಾಪ್ತಿ.

16. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾರ್ಯಾರಂಭ ಮಾಡದ ಶಾಖೆಗಳ ಅನುಮತಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

17. ಶಾಖಾ ವಿಲೀನ, ಸ್ಥಳಾಂತರ ಹಾಗೂ ಮುಚ್ಚುವಿಕೆಯ ಸಂದರ್ಭದಲ್ಲಿ –

   1. ಶಾಖಾ ವಿಲೀನ, ಸ್ಥಳಾಂತರ ಹಾಗೂ ಮುಚ್ಚುವಿಕೆಯ ಸ್ಥಿತಿ ನಿರ್ಮಾಣವಾದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸತಕ್ಕದ್ದು ಹಾಗೂ ಸದರಿ ಶಾಖೆಯಲ್ಲಿ ವ್ಯವಹಾರ ಹೊಂದಿರುವವರಿಗೆ ಯಾವ ಶಾಖೆಯಿಂದ ಸೇವೆ ಒದಗಿಸಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ನಿರ್ಣಯದಲ್ಲಿ ದಾಖಲಿಸತಕ್ಕದ್ದು.
   2. ಶಾಖೆಯಲ್ಲಿ ವ್ಯವಹಾರ ಹೊಂದಿರುವ ಎಲ್ಲಾ ಸದಸ್ಯರಿಗೆ ಲಿಖಿತದಲ್ಲಿ ಪ್ರಸಕ್ತ ಶಾಖೆಯ ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ಮಾಹಿತಿ ನೀಡತಕ್ಕದ್ದು ಹಾಗೂ ಮುಂದಿನ ವ್ಯವಹಾರ ನಿರ್ವಹಿಸಬೇಕಾದ ಶಾಖೆಯ ವಿವರ ಒದಗಿಸತಕ್ಕದ್ದು.

3. ಶಾಖೆಯ ಠೇವಣಿದಾರ ಬೇರೊಂದು ಶಾಖೆಯಿಂದ ವ್ಯವಹಾರ ನಡೆಸಲು ಒಪ್ಪದಿದ್ದಲ್ಲಿ ಅವನ ಠೇವಣಿಯನ್ನು ಯಾವುದೇ ಕಡಿತ ಮಾಡದೆ ಹಿಂತಿರುಗಿಸತಕ್ಕದ್ದು.
4. ಶಾಖೆ ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ಮಾಹಿತಿಯನ್ನು ಆಡಳಿತ ಮಂಡಳಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಗೆ, ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಸಹಕಾರಿಯ ತಕ್ಷಣದ/ಮುಂಬರುವ ಸಾಮಾನ್ಯ ಸಭೆಗೆ ಮಾಹಿತಿ ನೀಡತಕ್ಕದ್ದು.

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು**

1. ಶಾಖೆ ತೆರೆಯುಲು ಉದ್ದೇಶಿಸಿರುವ ಸ್ಥಳದ ವಿವರ.
2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ, ಪ್ರಸ್ತಾವಿತ ಶಾಖೆಯ ಪ್ರದೇಶದಲ್ಲಿನ ಸದಸ್ಯರ ಸಂಖ್ಯೆ.
3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ-ಜವಾಬ್ದಾರಿ ತಃಖ್ತೆ, ಲಾಭ-ಹಾನಿ ತಃಖ್ತೆ ಮತ್ತು ಜಮಾ-ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ).
4. ಹಿಂದಿನ ಎರಡು ವರ್ಷಗಳಲ್ಲಿ ಸದಸ್ಯರಿಗೆ ಹಂಚಿಕೆ ಮಾಡಿರುವ ಲಾಭಾಂಶ.
5. ಹಿಂದಿನ ಎರಡು ವರ್ಷಗಳ ಸುಸ್ತಿ ಸಾಲದ ಪ್ರಮಾಣ.
6. ಸ್ವಂತ ಬಂಡವಾಳ (ಪಾವತಿಯಾದ ಶೇರು ಬಂಡವಾಳ + ಎಲ್ಲಾ ರೀತಿಯ ಮೀಸಲು ನಿಧಿಗಳು – ಕೂಡಿಬಿದ್ದ ನಷ್ಟಗಳು).
7. ಯಾವುದೇ ರೀತಿಯ ವಿಚಾರಣೆ ನಡೆಯುತ್ತಿದ್ದಲ್ಲಿ ಆದೇಶ ಪತ್ರ, ನಡೆದಿದ್ದಲ್ಲಿ ವಿಚಾರಣ ವರದಿ.
8. ಈಗಿರುವ ಒಟ್ಟು ಶಾಖೆಗಳ ವಿವರ – ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ, ಠೇವಣಿ, ಸಾಲ, ಪತ್ತೇತರ ಚಟುವಟಿಕೆಯ ವಿವರ.
9. ಪ್ರಸ್ತಾವಿತ ಶಾಖೆಯನ್ನು ಆರಂಭಿಸಲು ಅಗತ್ಯ ಬಂಡವಾಳ – ಕಛೇರಿ ಬಾಡಿಗೆ ಠೇವಣಿ, ಪೀಠೋಪಕರಣಗಳು, ಯಂತ್ರೋಪಕರಣಗಳು ಇತ್ಯಾದಿ.
10. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷಗಳ ಅಂದಾಜು ಖರ್ಚು ವೆಚ್ಚಗಳು – ಸಿಬ್ಬಂದಿ ವೆಚ್ಚ, ಬಾಡಿಗೆ, ವಿದ್ಯುತ್, ದೂರವಾಣಿ, ಸ್ಟೇಷನರಿ ಇತ್ಯಾದಿ.
11. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷದ ಅಂದಾಜು ವ್ಯವಹಾರ.
12. ಪ್ರಸ್ತಾವಿತ ಶಾಖೆಯ ಸ್ಥಾನದಿಂದ ಈಗಿರುವ ಹತ್ತಿರದ ಶಾಖೆಗೆ ಇರುವ ದೂರ.
13. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಬೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.
14. ಪತ್ತೇತರ/ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಯ ಸಂದರ್ಭದಲ್ಲಿ, ಪ್ರಸ್ತಾವಿತ ಸೇವಾ ಚಟುವಟಿಕೆ ಹೊರತುಪಡಿಸಿ ಇನ್ನಿತರ ಚಟುವಟಿಕೆ ನಡೆಸದಿರುವ ಕುರಿತು ಆಡಳಿತ ಮಂಡಳಿ ನಿರ್ಣಯದೊಂದಿಗೆ ದೃಢೀಕರಣ ಪತ್ರ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : 01.01.2021 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 * Bangalore *

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ